ದಿನಾಂಕಃ 18-10-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲು : ಆರೋಪಿ ಪರ ಶ್ರೀ ಪಿ ಬಿ ಜಿ ವಕೀಲರಿಂದ**

ನಾನು ಮೂಲತಃ ರಾಯಚೂರಿನವಳು. ಈಗ ಹಾಲೀ ವಸತಿ ಜಮಖಂಡಿ. ನಾನು ಡಿಗ್ರೀ ವಿದ್ಯಾಭ್ಯಾಸ ಮಾಡಿದ್ದೇನೆ. ನಾನು ಹಪ್ಪಳ, ರೊಟ್ಟಿ ಮಾಡುವುದು ಹಾಗೂ ಮನೆಗೆಲಸ ಮಾಡುತ್ತೇನೆ. ದೂರು ದಾಖಲಿಸಲು ನಾನೇ ಮಾಹಿತಿ ನೀಡಿದ್ದೇನೆ. ಆರೋಪಿ 3-4 ವರುಷಗಳಿಂದ ಪರಿಚಯ. ನಾನು ಬಿ ಪಿ ಎಲ್ ಪಡಿತರ ಚೀಟಿ ಹೊಂದಿದ್ದೇನೆ. ಆರೋಪಿ ತಮ್ಮ ಮನೆಯಲ್ಲಿ ಕಷ್ಟ ಇರುವುದಾಗಿ ಕೇಳಿಕೊಂಡಿದ್ದು ನಾನು ಅವರಿಗೆ ಹಣ ನೀಡಿರುತ್ತೇನೆ. ನಾನು ಆರೋಪಿಗೆ ಎರಡು ಸಲ ಹಣ ನೀಡಿ ಮೂರನೇ ಸಲ ರೂ.5,00,000/- ಗಳನ್ನು ನೀಡಿರುತ್ತೇನೆ. ಸದರಿ ಎರಡು ಸಲ ಹಣ ಕೊಟ್ಟ ಬಗ್ಗೆ ನನ್ನ ದೂರು ಅಥವಾ ನೋಟೀಸಿನಲ್ಲಿ ನಮೂದಿಸಿಲ್ಲ ಎಂದರೆ ಸರಿ. ಸದರಿ ಹಣವನ್ನು 2023 ರಲ್ಲಿ ನೀಡಿದ್ದೇನೆ. ಆರೋಪಿಗೆ ರೂ.5,00,000/- ಹಣ ಯಾವ ದಿನ ನೀಡಿದ್ದೇನೆ ದೂರಿನಲ್ಲಿ ನಮೂದಿಸಿಲ್ಲ ಎಂದರೆ ಸರಿ. ನಾನು ಲೇವಾದೇವಿ ಪರವಾನಿಗೆ ಹೊಂದಿಲ್ಲ. ನಾನು ಆರೋಪಿಗೆ ನೀಡಿರುವ ರೂ.5,00,000/- ಹಣವನ್ನು ನನ್ನ ತವರು ಮನೆಯಿಂದ ತಂದಿದ್ದೆನು. ಸದರಿ ರೂ.5,00,000/- ಹಣವನ್ನು ತವರು ಮನೆಯಿಂದ ತಂದ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ.

ರೂ.5,00,000/- ಸದರಿ ಹಣವನ್ನು ಆರೋಪಿಗೆ ನಗದು ರೂಪದಲ್ಲಿ ನೀಡಿದ್ದೆನು. ರೂ. 20,000/- ಕ್ಕಿಂತ ಹೆಚ್ಚು ಹಣವನ್ನು ನಗದು ರೂಪದಲ್ಲಿ ನೀಡಲು ಬರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ನನಗೆ ತಿಂಗಳಿಗೆ 30 ರಿಂದ 40 ಸಾವಿರ ರೂ ಆದಾಯ ಇದೆ. ಸದರಿ ಆದಾಯದ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ. ನಾನು ಆದಾಯ ತೆರಿಗೆ ಪಾವತಿದಾರಳು ಅಲ್ಲ. ಆರೋಪಿಗೆ ಹಣವನ್ನು ನಮ್ಮ ಮನೆಯಲ್ಲಿಯೇ ಕೊಟ್ಟರು. ಆರೋಪಿ ಸರ್ಕಾರಿ ಶಾಲಾ ಶಿಕ್ಷಕಿ ಎಂದರೆ ಸರಿ. ಆರೋಪಿಗೆ ತಿಂಗಳಿಗೆ 90,000/- ರೂ ಸಂಬಳ ಇದೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿಗೆ ಇಬ್ಬರು ಗಂಡು ಮಕ್ಕಳು ಎಂದರೆ ಸರಿ. ಒಬ್ಬ ಇಂಜಿನಿಯರ ಹಾಗೂ ಇನ್ನೊಬ್ಬ ಖಾಸಗೀ ಕೆಲಸ ಮಾಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿಯ ಮಕ್ಕಳಿಗೆ ಹಾಗೂ ಆರೋಪಿಗೆ ಸೇರಿ ತಿಂಗಳಿಗೆ ಒಂದು ವರೆ ಲಕ್ಷ ರೂ ಗಳ ಆದಾಯ ಇದೆ ಎಂದರೆ ನನಗೆ ಗೊತ್ತಿಲ್ಲ. ಆರೊಪಿ ಸರ್ಕಾರಿ ನೌಕರ ಇರುವ ಕಾರಣ ಅವರಿಗೆ ವೇತನದ ಮೇಲೆ ಜಿ ಪಿ ಎಫ್, ಕೆ ಜಿ ಐ ಡಿ, ಮತ್ತು ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಸುಲಭವಾಗಿ ಸಾಲ ಸಿಗುತ್ತದೆ ಎಂದರೆ ಸಿಗಬಹುದು ಎನ್ನುತ್ತಾರೆ. ಆದ್ದರಿಂದ

ಖಾಸಗೀ ವ್ಯಕ್ತಿಗಳ ಕಡೆಯಿಂದ ಕೈಸಾಲ ಮಾಡುವ ಪ್ರಮೆಯ ಇಲ್ಲ ಎಂದರೆ ನನಗೆ ಗೊತ್ತಿಲ್ಲ. ಆರೋಪಿಗೆ ಯಾವತ್ತೂ ದುಡ್ಡಿನ ಅವಶ್ಯಕತೆ ಇರಲಿಲ್ಲ ಮತ್ತು ಅವರು ನನ್ನ ಬಳಿ ಹಣ ಪಡೆದಿಲ್ಲ ಎಂದರೆ ಸರಿಯಲ್ಲ.

ದಿಃ 27-01-2023 ರಂದು ಆರೋಪಿ ನನಗೆ ಒಂದು ಚೆಕ್ಕ ನೀಡಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿಃ 31-01-2023 ರಂದು ಚೆಕ್ಕ ನಗದೀಕರಣ ಆಗಲಿಲ್ಲ ಎಂದು ನಾನು ಆರೋಪಿಗೆ ನೀಡಿರುವ ನೋಟೀಸು ಅವರಿಗೆ ಬಂಧನಕಾರಿಯಾಗುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮತ್ತು ಆರೋಪಿ ಮಧ್ಯ ಹಣದ ವ್ಯವಹಾರ ಆಗಿಲ್ಲ ಎಂದರೆ ಸರಿಯಲ್ಲ. ಮಂಜುಳಾ ಯರಗೊಪ್ಪ, ಕವಿತಾ ರಾಮದುರ್ಗ, ಕಾಂಚನಾ ಕಲಾಣಿ ಮತ್ತು ರಾಜೇಶ್ವರಿ ಬಿಜ್ಜರಗಿ ರವರ ಮುಖ ಪರಿಚಯ ಇದೆ ಎಂದರೆ ಸರಿ. ನಾವೆಲ್ಲರೂ ಒಂದೇ ಏರಿಯಾದಲ್ಲಿ ಇರುತ್ತೇವೆ ಎಂದರೆ ಸರಿ. ಮಂಜುಳಾ ಯರಗೊಪ್ಪ, ಕವಿತಾ ರಾಮದುರ್ಗ, ಕಾಂಚನಾ ಕಲಾಣಿ ಮತ್ತು ರಾಜೇಶ್ವರಿ ಬಿಜ್ಜರಗಿ ರವರು ನನಗೆ ಅಷ್ಟಾಗಿ ಪರಿಚಯ ಇಲ್ಲ ಎನ್ನುತ್ತಾರೆ. ಮಂಜುಳಾ ಯರಗೊಪ್ಪ, ಕವಿತಾ ರಾಮದುರ್ಗ, ಕಾಂಚನಾ ಕಲಾಣಿ ಮತ್ತು ರಾಜೇಶ್ವರಿ ಬಿಜ್ಜರಗಿ ಹಾಗೂ ನಾನು ಸೇರಿ ಒಂದು ಖಾಸಗಿ ಬಿಸಿ ನಡೆಸುತ್ತೇವೇ ಎಂದರೆ ಸರಿಯಲ್ಲ. ಅದರಲ್ಲಿ ನೂರು ಜನ ಸದಸ್ಯರಿದ್ದಾರೆ ಎಂದರೆ ಸರಿಯಲ್ಲ . ಪ್ರತೀ ಸದಸ್ಯರಿಂದ ಪ್ರತೀ ತಿಂಗಳು ತಲಾ 5,000/- ರೂಗಳಂತೆ 5,00,000/- ರೂಗಳ ಮಾಹೆಯಾನ ಜಮೆ ಮಾಡುತ್ತೇವೆ ಎಂದರೆ ಸರಿಯಲ್ಲ. ಸದರಿ ಬಿಸಿಯಲ್ಲಿ ಕಮಿಷನ ಕಡಿತ ಮಾಡಿ ಉಳಿದ ಹಣವನ್ನು ಒಬ್ಬರಿಗೆ ಕೊಡುವ ಪದ್ದತಿ ಇದೆ ಎಂದರೆ ನನಗೆ ಗೊತ್ತಿಲ್ಲ. ಆಗ ಪ್ರತೀ ಸದಸ್ಯರ ಬಳಿ ಸಹಿ ಮಾಡಿದ ಖಾಲೀ 10 ಚೆಕ್ಕುಗಳನ್ನು ಭದ್ರತೆಗಾಗಿ ಪಡೆದಿರುತ್ತೇವೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಬಿಸಿ ಮುಗಿದ ನಂತರ ಸದರಿ ಚೆಕ್ಕುಗಳನ್ನು ಸದಸ್ಯರಿಗೆ ವಾಪಸ್ಸು ನೀಡುವ ಪದ್ದತಿ ಇದೆ ಎಂದಗೆ ನನಗೆ ಗೊತ್ತಿಲ್ಲ. ಅದೇ ರೀತಿ ಆರೋಪಿ ಕಡೆಯಿಂದ ಭದ್ರತೆಗಾಗಿ ಸಹಿ ಮಾಡಿದ ಖಾಲೀ 10 ಚೆಕ್ಕುಗಳನ್ನು ಪಡೆದಿದ್ದೆವು ಎಂದರೆ ಸರಿಯಲ್ಲ. ಬಿಸಿ ವ್ಯವಹಾರ ಮಾಡಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಬಿಸಿಯಲ್ಲಿ ಕಮಿಷನ ಗೊಸ್ಕರ ನಮ್ಮೆಲ್ಲರ ಮಧ್ಯೆ ಜಗಳ ಆಗಿದೆ ಎಂದರೆ ಸರಿಯಲ್ಲ.

ನಾನು ಮತ್ತು ಇನ್ನುಳಿದ ಬಿಸಿ ಸದಸ್ಯರು ಆರೋಪಿ ಕಡೆಯಿಂದ ಬಿಸಿ ಹಣ ವಾಪಸ್ಸು ಪಡೆದು ಅವರಿಗೆ ಚೆಕ್ಕು ನೀಡಿಲ್ಲ ಎಂದರೆ ಸರಿಯಲ್ಲ. ಬಿಸಿ ವ್ಯವಹಾರ ಮುಗಿದ ಮೇಲೆ ಆರೋಪಿ ಸದರಿ ಚೆಕ್ಕು ವಾಪಸ್ಸು ನೀಡುವಂತೆ ಕೇಳಿಕೊಂಡರೂ ಸಹ ನಾನು ನೀಡಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ಸದರಿ ಚೆಕ್ಕು ನೀಡುವ ಬಗ್ಗೆ ನಾವು ಸದಸ್ಯರು ಒಬ್ಬರು ಇನ್ನೊಬ್ಬರ

ಮೇಲೆ ಹೇಳುತ್ತಾ ಮುಂದೂಡುತ್ತಾ ಹೋದೆವು ಎಂದರೆ ಸರಿಯಲ್ಲ. ಕೊನೆಗೆ ಸದರಿ ಚೆಕ್ಕುಗಳು ಕಳೆದು ಹೋಗಿವೆ ಎಂದು ಆರೋಪಿಗೆ ಹೇಳಿದೆವು ಎಂದರೆ ಸರಿಯಲ್ಲ. ಸದರಿ ಕಳೆದು ಹೋದ ಬಗ್ಗೆ ಲಿಖಿತ ರೂಪದಲ್ಲಿ ನೀಡುವಂತೆ ಆರೋಪಿ ಕೇಳಿಕೊಂಡರೂ ನಾವು ನೀಡಲಿಲ್ಲ ಎಂದರೆ ಸರಿಯಲ್ಲ. ಆರೋಪಿ ಚೆಕ್ಕ ಕೇಳಲು ಬಂದಾಗ ಜಗಳ ಆಗಿತ್ತು ಎಂದರೆ ಸರಿಯಲ್ಲ. ಆರೋಪಿ ಸರ್ಕಾರಿ ನೌಕರನಾದ ಕಾರಣ ಗೌರವಕ್ಕಾಗಿ ನನ್ನ ವಿರುದ್ದ ಪೋಲೀಸ ದೂರು ನೀಡಿಲ್ಲ ಎಂದರೆ ಸರಿಯಲ್ಲ. ಸದರಿ ಚೆಕ್ಕಿನಲ್ಲಿ 27-01-2023 ರೂ.5,00,000/- ನಮ್ಮ ಅನುಕೂಲಕ್ಕೆ ತಕ್ಕಂತೆ ನಮೂದಿಸಿ ಹಾಜರುಪಡಿಸಿದ್ದೇವೆ ಎಂದರೆ ಸರಿಯಲ್ಲ. ಆರೋಪಿ ನೀಡಿರುವ ಭದ್ರತೆಯ ಚೆಕ್ಕುಗಳನ್ನು ದುರುಪಯೋಗ ಪಡಿಸಿಕೊಂಡು ಸುಳ್ಳು ದೂರು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

ಆರೋಪಿಯ 10 ಚೆಕ್ಕುಗಳಲ್ಲಿ 1 ನನ್ನ ಪರವಾಗಿ, 1 ಮಂಜುಳಾ ಯರಗೊಪ್ಪ ಗಂಡ ಬಸವರಾಜ ರವರ ಹೆಸರಿಗೆ 3 ಲಕ್ಷ, ಸಿಸಿ ನಂ 101/2023, ಕವಿತಾ ರಾಮದುರ್ಗ ರವರು ಸಿಸಿ ನಂ 1586/2024, 1587/2024, 1588/2024 ತಲಾ 5 ಲಕ್ಷ ರೂಗಳ ಚೆಕ್ಕುಗಳಿಗಾಗಿ ದೂರು ದಾಖಲಿಸಿದ್ದು, ಕಾಂಚನಾ ಕಲ್ಯಾಣಿ ರವರು 7 ಲಕ್ಷ ರೂಗಳಿಗಾಗಿ ಸಿಸಿ 507/2023 ರಂತೆ ಬೇರೆ ಬೇರೆ ಪ್ರಕರಣಗಳನ್ನು ಆರೋಪಿಗೆ ತೊಂದರೆ ಕೊಡಲು ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ಆರೋಪಿಯ ಇನ್ನು 4 ಚೆಕ್ಕುಗಳು ನಮ್ಮ ಸದಸ್ಯರ ಬಳಿ ಇವೆ ಎಂದರೆ ಸರಿಯಲ್ಲ. ಆರೋಪಿ ಕಾನೂನು ಬದ್ದವಾಗಿ ನನಗೆ ಯಾವುದೇ ಹಣ ನೀಡುವುದು ಬಾಕಿ ಇಲ್ಲ ಎಂದರೆ ಸರಿಯಲ್ಲ. ನನಗೆ ಯಾವುದೇ ಆದಾಯ ಇಲ್ಲ ಎಂದರೆ ಸರಿಯಲ್ಲ. ನಾನು ಬೇರೆಯವರಿಗೆ ಸಾಲ ಕೊಡುವ ಸಾಮರ್ಥ್ಯ ನನಗೆ ಇಲ್ಲ ಎಂದರೆ ಸರಿಯಲ್ಲ. ಆರೋಪಿಗೆ ನಾನು ಯಾವುದೇ ಹಣ ಕೊಡದಿದ್ದರೂ ಸುಳ್ಳು ಕೇಸ ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೆ ಯಾವ ಖಾಸಗೀ ಅಡಚಣೆಯಂದು ಕೇಳಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಅಂತಾ ಒಪ್ಪಿರುವರು.

ಸಹಿ/-

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,

ಜಮಖಂಡಿ